# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:-** 2018-19 ಹಾಗೂ 2019-20 ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ನಿರ್ಮಿಸಿದ ತೆರೆದ ಬಾವಿಗಳಿಗೆ ಮಾನೋಬ್ಲಾಕ್ ಪಂಪ್‌ಸೆಟ್/ಡೀಸೆಲ್ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡುವ ಬಗ್ಗೆ.

**ಓದಲಾಗಿದೆ:-** ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಅಭಿವೃದ್ಧಿ ನಿಗಮ ನಿಯಮಿತ ಇವರ ಏಕಕಡತದ ಪ್ರಸ್ತಾವನೆ ಸಂಖ್ಯೆ:ದೇಹಿನಿ/ಗಂ.ಕ./ಸಿಆರ್-09/2020-21.

*********

**ಪ್ರಸ್ತಾವನೆ:-**

ಮೇಲೆ ಓದಲಾದ ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರ ಏಕಕಡತದ ಪ್ರಸ್ತಾವನೆಯಲ್ಲಿ 2018--19 ಹಾಗೂ 2019-20ನೇ ಸಾಲಿನ 175 ತೆರೆದ ಬಾವಿಗಳಿಗೆ ಅಂದಾಜು ಮೊತ್ತ ರೂ.80.00 ಲಕ್ಷಗಳಿಗೆ ಮಾನೋಬ್ಲಾಕ್ ಪಂಪ್‌ಸೆಟ್/ಡೀಸೆಲ್ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಲು ನಿಗಮದಿಂದ ದಿನಾಂಕ:06.03.2020 ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ ಟೆಂಡರ್‌ನಲ್ಲಿ ಯಾವುದೇ ಬಿಡ್‌ಗಳು ಸ್ವೀಕೃತಗೊಂಡಿರುವುದಿಲ್ಲ. ದಿನಾಂಕ:30.06.2021 ರಂದು ನಡೆದ ನಿಗಮದ ನಿರ್ದೇಶಕ ಮಂಡಳಿಯ 188 ನೇ ಸಭೆಯಲ್ಲಿ ತೆರೆದ ಬಾವಿಗಳಿಗೆ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡುವ ವಿಷಯದ ಬಗ್ಗೆ ಚರ್ಚಿಸಲಾಗಿರುತ್ತದೆ. ತೆರೆದ ಬಾವಿಗಳನ್ನು ನಿರ್ಮಿಸುತ್ತಿರುವ 6 ಜಿಲ್ಲೆಗಳಲ್ಲಿ ತೆರೆದ ಬಾವಿಗಳಿಗೆ ಸರಬರಾಜು ಮಾಡಬೇಕಾದ ಪಂಪ್‌ಸೆಟ್‌ಗಳ ಸಂಖ್ಯೆ ಕಡಿಮೆ ಇರುವ ಹಿನ್ನಲೆಯಲ್ಲಿ ಮರು ಟೆಂಡರ್ ಆಹ್ವಾನಿಸದರೂ ಸಹ ಅರ್ಹ ಬಿಡ್‌ಗಳನ್ನು ಸ್ವೀಕರಿಸುವ ಸಾಧ್ಯತೆ ಕಡಿಮೆ ಹಾಗೂ ಸರಬರಾಜಿನಲ್ಲಿ ಮತ್ತೆ ವಿಳಂಬವಾಗುವುದರಿಂದ ಮತ್ತು ತೆರೆದ ಬಾವಿಗಳನ್ನು ನಿರ್ಮಿಸಿ ಈಗಾಗಲೇ ಹೆಚ್ಚಿನ ಸಮಯವಾಗಿದ್ದು, ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು ಒದಗಿಸದೇ ವಿಳಂಬವಾಗಿರುವ ಬಗ್ಗೆ ಫಲಾನುಭವಿಗಳು ಹಾಗೂ ಚುನಾಯಿತ ಪ್ರತಿನಿಧಿಗಳಿಂದ ಆಕ್ಷೇಪಣೆ ವ್ಯಕ್ತವಾಗುತ್ತಿದ್ದು, ಫಲಾನುಭವಿಗಳ ಹಿತ ದೃಷ್ಟಿಯಿಂದ ಟೆಂಡರ್ ಆಹ್ವಾನಿಸುವ ಪದ್ಧತಿಯನ್ನು ಪರಿಷ್ಕರಿಸಿ ಈ ಕೆಳಕಂಡಂತೆ ವಿಧಾನವನ್ನು ಅಳವಡಿಸಕೊಳ್ಳಲು ತೀರ್ಮಾನಿಸಲಾಗಿರುತ್ತದೆ.

1. ತೆರೆದ ಬಾವಿಗೆ ಮಾನೋಬ್ಲಾಕ್ ಸಬ್‌ಮರ್ಸಿಬಲ್ ಪಂಪ್‌ಸೆಟ್/ಡೀಸಲ್ ಪಂಪ್‌ಸೆಟ್ ಹಾಗೂ ಇತರೆ ಪೂರಕ ಸಾಮಗ್ರಿಗಳ ಸರಬರಾಜಿಗೆ ಪ್ರತಿ ಫಲಾನುಭವಿಗೆ ನಿಗಧಿಪಡಿಸಿರುವ ರೂ.50,000/-ಗಳ ಮೊತ್ತದಲ್ಲಿ ವಿದ್ಯುತ್ ಠೇವಣಿ ಪಾವತಿಸುವುದು. ನಂತರ ಉಳಿಯುವ ಮೊತ್ತದ ಮಿತಿಯಲ್ಲಿ ತೆರೆದ ಬಾವಿಗೆ ಅಗತ್ಯವಿರುವ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು ಸ್ಥಳೀಯವಾಗಿ ಫಲಾನುಭವಿವಾರು ದರಪಟ್ಟಿ ಆಹ್ವಾನಿಸಿ ಎಲ್-1 ದರದಂತೆ ಸಾಮಗ್ರಿಗಳನ್ನು ಒದಗಿಸುವುದು. ದರಗಳು ಸ್ಪರ್ಧಾತ್ಮಕವಾಗಿದ್ದು ಎಸ್.ಆರ್. ದರಗಳಿಗಿಂತ ಕಡಿಮೆ ಇರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ದೃಢೀಕರಿಸುವುದು.

2. ಮಾನೋಬ್ಲಾಕ್ ಸಬ್‌ಮರ್ಸಿಬಲ್ ಪಂಪ್‌ಸೆಟ್ 4 ಅಥವಾ 5 Star Rating ಹೊಂದಿರತಕ್ಕದ್ದು, ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳು ಐ.ಎಸ್.ಐ ಗುಣಮಟ್ಟದ್ದಾಗಿರತಕ್ಕದ್ದು.

3. ಪಂಪ್‌ಸೆಟ್ ಸರಬರಾಜು ಅಳವಡಿಕೆ ಪೂರ್ಣಗೊಂಡ ನಂತರ ಫಲಾನುಭವಿ ದೃಢೀಕರಣ, ಸರಬರಾಜಿನ ಫೋಟೋ, ಜಿಲ್ಲಾ ವ್ಯವಸ್ಥಾಪಕರ ಪರಿಶೀಲನೆ ಹಾಗೂ ದೃಢೀಕರಣದ ನಂತರ ನಿಯಮಾನುಸಾರ ಸರಬರಾಜಿನ ಬಿಲ್ಲಿನ ಮೊತ್ತವನ್ನು ಪಾವತಿಸುವುದು.

ನಿರ್ದೇಶಕ ಮಂಡಳಿ ತೀರ್ಮಾನದಂತೆ ಮೇಲ್ಕಂಡ ವಿಧಾನವನ್ನು ನಿಗಮದಲ್ಲಿ ಅಳವಡಿಸಿಕೊಂಡು 2018-19 ಮತ್ತು 2019-20 ನೇ ಸಾಲಿನಲ್ಲಿ ನಿರ್ಮಿಸಿದ ತೆರೆದ ಬಾವಿಗಳಿಗೆ ಮಾನೋಬ್ಲಾಕ್ ಪಂಪ್‌ಸೆಟ್/ಡೀಸೆಲ್ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು ಒದಗಿಸಲು ಅನುಮೋದನೆ ನೀಡುವಂತೆ ಕೋರಿ ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಹಿನ್ನೆಲೆಯಲ್ಲಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

**<u>ಸರ್ಕಾರದ ಆದೇಶ ಸಂಖ್ಯೆ:ಬಿಸಿಡಬ್ಲ್ಯೂ 373 ಬಿಎಂಎಸ್ 2021,</u>**
**<u>ಬೆಂಗಳೂರು, ದಿನಾಂಕ:29-07-2022</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2018-19 ಹಾಗೂ 2019-20ನೇ ಸಾಲಿನಲ್ಲಿ ಗಂಗಾ ಕಲ್ಯಾಣ ಯೋಜನೆಯಡಿ ನಿರ್ಮಿಸಿದ 175 ತೆರೆದ ಬಾವಿಗಳಿಗೆ ಈ ಕೆಳಕಂಡ ವಿಧಾನವನ್ನು ಅನುಸರಿಸಿ ಮಾನೋಬ್ಲಾಕ್ ಪಂಪ್‌ಸೆಟ್/ಡೀಸೆಲ್ ಪಂಪ್‌ಸೆಟ್ ಮತ್ತು ಪೂರಕ ಸಾಮಗ್ರಿಗಳನ್ನು ಸರಬರಾಜು ಮಾಡಲು ಅನುಮೋದನೆ ನೀಡಿ ಆದೇಶಿಸಿದೆ.

1. ತೆರೆದ ಬಾವಿಗೆ ಮಾನೋಬ್ಲಾಕ್ ಸಬ್‌ಮರ್ಸಿಬಲ್ ಪಂಪ್‌ಸೆಟ್/ಡೀಸಲ್ ಪಂಪ್‌ಸೆಟ್ ಹಾಗೂ ಇತರೆ ಪೂರಕ ಸಾಮಗ್ರಿಗಳ ಸರಬರಾಜಿಗೆ ಪ್ರತಿ ಫಲಾನುಭವಿಗೆ ನಿಗಧಿಪಡಿಸಿರುವ ರೂ.50,000/-ಗಳ ಮೊತ್ತದಲ್ಲಿ ವಿದ್ಯುತ್ ಠೇವಣಿ ಪಾವತಿಸುವುದು. ನಂತರ ಉಳಿಯುವ ಮೊತ್ತದ ಮಿತಿಯಲ್ಲಿ ತೆರೆದ ಬಾವಿಗೆ ಅಗತ್ಯವಿರುವ ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳನ್ನು ಸ್ಥಳೀಯವಾಗಿ ಫಲಾನುಭವಿವಾರು ದರಪಟ್ಟಿ ಆಹ್ವಾನಿಸಿ ಎಲ್-1 ದರದಂತೆ ಸಾಮಗ್ರಿಗಳನ್ನು ಒದಗಿಸುವುದು. ದರಗಳು ಸ್ಪರ್ಧಾತ್ಮಕವಾಗಿದ್ದು ಎಸ್.ಆರ್. ದರಗಳಿಗಿಂತ ಕಡಿಮೆ ಇರುವ ಬಗ್ಗೆ ಜಿಲ್ಲಾ ವ್ಯವಸ್ಥಾಪಕರು ದೃಢೀಕರಿಸುವುದು.

2. ಮಾನೋಬ್ಲಾಕ್ ಸಬ್‌ಮರ್ಸಿಬಲ್ ಪಂಪ್‌ಸೆಟ್ 4 ಅಥವಾ 5 Star Rating ಹೊಂದಿರತಕ್ಕದ್ದು, ಪಂಪ್‌ಸೆಟ್ ಹಾಗೂ ಪೂರಕ ಸಾಮಗ್ರಿಗಳು ಐ.ಎಸ್.ಐ ಗುಣಮಟ್ಟದ್ದಾಗಿರತಕ್ಕದ್ದು.

3. ಪಂಪ್‌ಸೆಟ್ ಸರಬರಾಜು ಅಳವಡಿಕೆ ಪೂರ್ಣಗೊಂಡ ನಂತರ ಫಲಾನುಭವಿ ದೃಢೀಕರಣ, ಸರಬರಾಜಿನ ಫೋಟೋ, ಜಿಲ್ಲಾ ವ್ಯವಸ್ಥಾಪಕರ ಪರಿಶೀಲನೆ ಹಾಗೂ ದೃಢೀಕರಣದ ನಂತರ ನಿಯಮಾನುಸಾರ ಸರಬರಾಜಿನ ಬಿಲ್ಲಿನ ಮೊತ್ತವನ್ನು ಪಾವತಿಸುವುದು.

3..

ಈ ಆದೇಶವನ್ನು ಮಾನ್ಯ ಇಲಾಖಾ ಸಚಿವರ ಅನುಮೋದನೆಯೊಂದಿಗೆ ಹಾಗೂ ಸರ್ಕಾರದ ಕಾರ್ಯದರ್ಶಿ/ಪ್ರಧಾನ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ,
ಮತ್ತು ಅವರ ಹೆಸರಿನಲ್ಲಿ

V. Akkamahadevi 29/7/22

**(ವಿ. ಅಕ್ಕಮಹಾದೇವಿ)**
ಸರ್ಕಾರದ ಅಧೀನ ಕಾರ್ಯದರ್ಶಿ-1
ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ.

<u>ಇವರಿಗೆ:-</u>

1. ಪ್ರಧಾನ ಮಹಾಲೇಖಪಾಲರು, (ಎ ಮತ್ತು ಇ ಲೆಕ್ಕಪರಿಶೋಧನೆ-1 ಮತ್ತು 2) ಕರ್ನಾಟಕ ಸರ್ಕಾರ ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು.
3. ಆಯುಕ್ತರು, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ವಸಂತನಗರ, ಬೆಂಗಳೂರು.
4. ರಾಜ್ಯ ಖಜಾನಾಧಿಕಾರಿಗಳು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.

**<u>ಪ್ರತಿ ಮಾಹಿತಿಗಾಗಿ:-</u>**

1. ಸರ್ಕಾರದ ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಕಾರ್ಯದರ್ಶಿ , ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಉಪಕಾರ್ಯದರ್ಶಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಇವರ ಆಪ್ತ ಸಹಾಯಕರು, ವಿಕಾಸಸೌಧ ಬೆಂಗಳೂರು.
3. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

***********